ಪಿ.ಡಬ್ಲೂಃ 1

<u>ದಿನಾಂಕಃ 23.12.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

ಪಿರ್ಯಾದಿದಾರರ ಪರ ವಕೀಲರು ಪಿರ್ಯಾದಿದಾರನ ಸ್ವಹೇಳಿಕೆ ಪ್ರಮಾಣಪತ್ರ ಮತ್ತು ಸದರಿ ದಾಖಲೆಗಳನ್ನು ನಿಶಾನೆಯಾಗಿ ಅಳವಡಿಸಿಕೊಳ್ಳಲು ಕೇಳಿಕೊಂಡಿರುತ್ತಾರೆ. ಪಿರ್ಯಾದಿದಾರನು ನಿಪಿ.1 ರಿಂದ ನಿಪಿ.12 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿ ಪರವಾಗಿ Sri. VSP, ವಕೀಲರಿಂದ</u>

1. ನಾನು ಲಕ್ಷ್ಮೇಶ್ವರದ ನಿವಾಸಿ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಪತ್ರಕರ್ತನಾಗಿದ್ದು ಆರೋಪಿಯು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದು, ಆ ಮುಖಾಂತರ ಆರೋಪಿಯು 7-8 ವರ್ಷಗಳಿಂದ ಪರಿಚಯ ಆಗಿರುತ್ತಾರೆ. ಆರೋಪಿಯು ಕಲಘಟಗಿ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದು, ಅವರ ಮೂಲ ಊರು ಸಾದನಕೇರಿ ಆಗಿರುತ್ತದೆ.

2. ಆರೋಪಿಯು ನನಗೆ ಪರಿವರ್ತನಾ ಸಹಕಾರಿ ಸಂಘದ ಮುಖಾಂತರ ಪರಿಚಯ ಆಗಿರುವುದಿಲ್ಲ ಎಂದರೆ ಸರಿ. ಸದರಿ ಸಂಘವು ನೋಂದಣಿ ಆಗಿರುತ್ತದೆ. ಆರೋಪಿಯು ಮನೆತನದ ಸಾಲ ತೀರಿಸಲು ಹಣ ಬೇಕೆಂದು ನನ್ನ ಬಳಿ ಕೇಳಿರುತ್ತಾನೆ. ಆರೋಪಿಯ ಕಡೆಯಿಂದ ಸಾಲದ ವಿವರವನ್ನು ಪಡೆದುಕೊಂಡಿಲ್ಲ ಎಂದರೆ ಸರಿ.

3. ಆರೋಪಿಗೆ ಬ್ಯಾಂಕಿನ ಮುಖಾಂತರ ಹಣ ವರ್ಗಾವಣೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನನಗೆ ಸಂಬಂಧಿಸಿದ ಕೃಷಿ ಭೂಮಿ ಕುಂದಗೋಳ ತಾಲೂಕಿನ ಸುಲ್ತಾನಪುರದಲ್ಲಿ ಇರುತ್ತದೆ. ಸದರಿ ಭೂಮಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸುತ್ತೇನೆ.

4. ದಿಃ 24.05.2022 ರಂದು ಆರೋಪಿಗೆ ಸುಮಾರು 2.5 ಲಕ್ಷ ಹಣ ಫೋನ ಪೇ ಮುಖಾಂತರ ಉಳಿದ 2.5 ಲಕ್ಷ ಹಣವನ್ನು ನಗದಾಗಿ ನೀಡಿರುತ್ತೇನೆ. ಫೋನ ಪೇ ಮುಖಾಂತರ ಪಾವತಿ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ 5 ಲಕ್ಷ ಹಣ ಕೃಷಿ ಆದಾಯದ ಮೂಲದಿಂದ ಬಂದಿರುತ್ತದೆ. ಆದಾಯದ ಮೂಲವನ್ನು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಕೃಷಿ ಮೂಲದಿಂದ ಸ್ವಲ್ಪ ಸ್ವಲ್ಪ ಹಣ ಕೂಡಿ ಇಟ್ಟಿದ್ದೆ ಎಂದು ನುಡಿಯುತ್ತಾರೆ.

5. ಹಣ ನೀಡಿದ 8-9 ತಿಂಗಳ ನಂತರ ಆರೋಪಿಗೆ ಮರು ಪಾವತಿಸುವಂತೆ ಕೇಳಿರುತ್ತೇನೆ. ಹಣ ಮರು ಪಾವತಿ ಮಾಡುವಂತೆ ಕೇಳಿದ ದಿನಾಂಕ ನನಗೆ ನೆನಪಿರುವುದಿಲ್ಲ. ಆರೋಪಿಗೆ ಹಣ ನೀಡುವ ಕಾಲಕ್ಕೆ ಯಾವುದೇ ಲಿಖಿತ ಕರಾರು ಮಾಡಿಕೊಂಡಿಲ್ಲ ಎಂದರೆ ಸರಿ. ಹಣವನ್ನು ಹುಬ್ಬಳ್ಳಿಯಲ್ಲಿ ನೀಡಿರುತ್ತೇನೆ.

6. ದಿಃ 01.02.2023 ರಂದು ಆರೋಪಿಯು ನಿಪಿ.1 ನ್ನು ನೀಡಿ, ದಿಃ 15.02.2023 ರಂದು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿರುತ್ತಾರೆ. ನಾನು ಚೆಕನ್ನು ನಗದೀಕರಣಕ್ಕೆ ಹಾಜರುಪಡಿಸಿದ 2-3 ದಿನಕ್ಕೆ ಬ್ಯಾಂಕನವರು ಹಿಂಬರಹ ನೀಡಿರುತ್ತಾರೆ. ಬ್ಯಾಂಕನವರು ಹಿಂಬರಹ ನೀಡಿದ ನಂತರ ಆರೋಪಿಗೆ ಚೆಕ್ಕು ಅಮಾನ್ಯಗೊಂಡ ಬಗ್ಗೆ ಫೋನನ ಮುಖಾಂತರ ತಿಳಿಸಿರುತ್ತೇನೆ.

7. ಚೆಕ್ಕು ಅಮಾನ್ಯಗೊಂಡ ನಂತರ ಮೊದಲನೆ ನೋಟಿಸನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನಮ್ಮ ವಕೀಲರನ್ನು ಕೇಳಬೇಕು ಅವರಿಗೆ ಗೊತ್ತು ಎಂದು ನುಡಿಯುತ್ತಾರೆ.

8. ಬ್ಯಾಂಕಿನವರು ಹಿಂಬರಹ ನೀಡಿದ 2-3 ದಿನಕ್ಕೆ ನಾನು ವಕೀಲರನ್ನು ಭೇಟಿ ಆಗಿರುತ್ತೇನೆ. ವಕೀಲರಿಗೆ ಹಿಂಬರಹ ನೀಡಿದಾಗ ಅವರು ನೋಟಿಸ ತಯಾರು ಮಾಡಿ ಮುಂದಿನ ಕ್ರಮ ಜರುಗಿಸಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಖ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ

ಪಿ.ಡಬ್ಲೂಃ 1

<u>ದಿನಾಂಕಃ 22.11.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲು ಆರೋಪಿ ಪರವಾಗಿ Sri. SSS, ವಕೀಲರಿಂದ</u>

ನಾನು ಬಿಎ ಪದವೀಧರ. ನನಗೆ ಪ್ರತಿದಿನ ಕೂಲಿ ಕೆಲಸದಿಂದ 150 ರಿಂದ 200 ಸಿಗುತ್ತದೆ. ನಾನು ಕೃಷಿ ಕೆಲಸ ಮಾಡುತ್ತೇನೆ. ಆರೋಪಿಗೆ ನಾನು 2021 ರಲ್ಲಿ 4 ಲಕ್ಷ ಹಣ ನೀಡಿದ್ದೇನೆ ಎಂದು ಸುಳ್ಳು ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. 2021 ರ ಅಕ್ಟೋಬರದಿಂದ ಸುಮಾರು 4 ತಿಂಗಳು ಆರೋಪಿಯು ಪಾಶ್ಚವಾಯುವಿನಿಂದ ಕೋಮಾನಲ್ಲಿ ಇದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2021 ರಲ್ಲಿ ಕರೋನಾ ಇದ್ದ ಕಾರಣ ಆರೋಪಿಯು ನನ್ನ ಮನೆಗೆ ಬಂದು ಹಣ ಪಡೆದಿದ್ದಾನೆ ಎಂದು ಸುಳ್ಳು ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸದಿಂದ ಸ್ವಲ್ಪ ಹಣವನ್ನು ಸಂಪಾದನೆ ಮಾಡುತ್ತಿದ್ದು, 4 ಲಕ್ಷ ಹಣ ನನ್ನ ಬಳಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ನನ್ನ ತಂದೆಯ ಮರಣ ಸಂಬಂಧಿತ ಹಣ ಹಾಗೂ ಮನೆ ಕಟ್ಟುವ ಸಲುವಾಗಿ ಕೂಡಿಟ್ಟ ಹಣ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಮರಣ ಪ್ರಮಾಣ ಪತ್ರದ ಪ್ರತಿಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಯಾರ ಹೆಸರು ಇದೆ ಎಂದು ಕೇಳಲು ಶಂಕರಸಾ ತಂದೆ ನಾರಾಯಣಸಾ ಪವಾರ ಎಂದು ಇರುತ್ತದೆ ಎಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಮುಂದುವರೆದು ಸದರಿ ದಾಖಲೆಗೂ ಆರೋಪಿಗೂ ಸಂಬಂಧಿಸಿರುವುದಿಲ್ಲ ಅದನ್ನು ಸೃಷ್ಟಿಸಿಕೊಂಡಿರಬಹುದು ಎಂದು ನುಡಿಯುತ್ತಾರೆ.

ನಾನು ಈ ಪ್ರಕರಣದಲ್ಲಿ ತೋರಿಸಿರುವ ಆರೋಪಿಗೆ ಸಂಬಂಧಿಸಿದ ಮರಣ ದಾಖಲೆಯಾಗಿದ್ದು, ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಮನೆಯ ಅಡಚಣೆಗಾಗಿ ಹಣವನ್ನು ಪಡೆದುಕೊಂಡಿರುತ್ತಾರೆ. ಆರೋಪಿಗೆ ಹಣ ನೀಡುವ ಕಾಲಕ್ಕೆ ಯಾವುದೇ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ಚೆಕ್ಕು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಆರೊಪಿಯು ನನ್ನಿಂದ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಹಾಗೂ ಚೆಕ್ಕು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತನ್ನ ವ್ಯಾಪಾರದಿಂದ ಹೆಚ್ಚಿನ ಆದಾಯ ಇದೆ ಎಂದರೆ ಸರಿ. ಆರೋಪಿಗೆ ತನ್ನ ವ್ಯಾಪಾರದಿಂದ ಎಷ್ಟು ಆದಾಯ ಇದೆ ಎಂದು ಹೇಳಲು ಬರುವುದಿಲ್ಲ. ಆರೋಪಿಯು ನನ್ನಿಂದ 2-3 ಬಾರಿ ಹಣವನ್ನು ಪಡೆದು ವಾಪಸ್ಸು ಮಾಡಿರುತ್ತಾರೆ ಆ ನಂಬಿಕೆಯಿಂದ ಹಣ ನೀಡಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ